**ಕರ್ನಾಟಕ ಸರ್ಕಾರ**
**ಸಹಕಾರ ಚುನಾವಣಾ ಆಯೋಗ**

ಸಂಖ್ಯೆ:ಸಚುಆ/ಚುನಾವಣೆ/ಡೆಲಿಗೇಟ್/26(1)/2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ(ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ:12.12.2013

**-:ಸುತ್ತೋಲೆ:-**

**ವಿಷಯ:-** ಸಹಕಾರ ಸಂಘದ ಸದಸ್ಯ /ಪ್ರತಿನಿಧಿ/ನಾಮ ನಿರ್ದೇಶಿತನು ಮತ ಚಲಾಯಿಸುವ ರೀತಿ -ಕುರಿತು.

**ಉಲ್ಲೇಖ:-** ಆಯೋಗದ ಸುತ್ತೋಲೆ ಸಂಖ್ಯೆ:ಸಚುಆ/ಚುನಾವಣೆ/ಡೆಲಿಗೇಟ್/26/ 2013-14, ದಿನಾಂಕ:05.09.2013

***

ಮಾಧ್ಯಮಿಕ ಹಾಗೂ ಫೆಡರಲ್ ಸಹಕಾರ ಸಂಘಗಳ ಆಡಳಿತ ಮಂಡಲಿ ಚುನಾವಣೆಗೆ ಸಂಬಂಧಿಸಿದಂತೆ, ಸದಸ್ಯ ಸಂಘಗಳು ಪ್ರತಿನಿಧಿ/ಡೆಲಿಗೇಟ್‌ಗಳನ್ನು ಕಳುಹಿಸುವ ಕುರಿತಂತೆ ಆಯೋಗವು ಉಲ್ಲೇಖಿತ ಸುತ್ತೋಲೆಯಲ್ಲಿ ಅನುಸರಿಸಬೇಕಾದ ಕ್ರಮ/ಅಧಿನಿಯಮ ಹಾಗೂ ನಿಯಮಗಳ ಅವಕಾಶಗಳ ಬಗ್ಗೆ ನೀಡಲಾಗಿದೆ.

ರಾಜ್ಯದಲ್ಲಿನ ಕೆಲವು ಅಪೆಕ್ಸ್ ಸಂಘಗಳು, ತಮ್ಮ ಸದಸ್ಯ ಫೆಡರಲ್ ಸಹಕಾರ ಸಂಘಗಳ ಸಾಮಾನ್ಯ ಸಭೆಯಲ್ಲಿ ಅಥವಾ ಚುನಾವಣೆಗೆ ಸಂಬಂಧಿಸಿದ ಆಡಳಿತ ಮಂಡಲಿಯ ಸಭೆಯಲ್ಲಿ ತಮ್ಮ ಪ್ರತಿನಿಧಿಗಳನ್ನು ಕಳುಹಿಸುವ ಮೂಲಕ ಪ್ರತಿನಿಧಿಸುವ ವ್ಯವಸ್ಥೆಯನ್ನು ಉಪವಿಧಿಗಳಲ್ಲಿ ಅಳವಡಿಸಿಕೊಂಡು ಪ್ರತಿನಿಧಿಗಳನ್ನು ಕಳುಹಿಸುತ್ತಿರುವುದು ಪದ್ಧತಿಯಾಗಿರಬಹುದು, ಈ ರೀತಿ ಪ್ರತಿನಿಧಿಸುವ ಸಂದರ್ಭದಲ್ಲಿ ಅಂಥ ಅಪೆಕ್ಸ್ ಸಂಘದ ಆಡಳಿತ ಮಂಡಳಿಯಿಂದ ಪ್ರಾಧಿಕೃತನಾದ ಅಧ್ಯಕ್ಷ ಅಥವಾ ಆಡಳಿತ ಮಂಡಳಿಯ ಸದಸ್ಯನ ಮೂಲಕ ಮಾತ್ರ ಪ್ರತಿನಿಧಿಸಲ್ಪಡತಕ್ಕದ್ದಾಗಿದೆ. ಆದರೆ ಕೆಲವು ಅಪೆಕ್ಸ್ ಸಂಘಗಳು ಸಂಘದ ಆಡಳಿತ ಮಂಡಲಿಯ ಸದಸ್ಯರಲ್ಲದವರನ್ನು ಪ್ರತಿನಿಧಿಯಾಗಿ ಬೇರೊಂದು ಸಹಕಾರ ಸಂಘದ ಸಾಮಾನ್ಯ ಸಭೆಯಲ್ಲಿ ಅಥವಾ ಆಡಳಿತ ಮಂಡಲಿ ಸಭೆಯಲ್ಲಿ ಭಾಗವಹಿಸಲು ಕಳುಹಿಸುತ್ತಿರುವ ಅಂಶ ಆಯೋಗದ ಗಮನಕ್ಕೆ ಬಂದಿರುತ್ತದೆ. ಈ ರೀತಿ ಅಪೆಕ್ಸ್ ಸಂಘಗಳು ತನ್ನ ಆಡಳಿತ ಮಂಡಳಿ ಸದಸ್ಯರಲ್ಲದವರನ್ನು ಬೇರೊಂದು ಸಹಕಾರ ಸಂಘಕ್ಕೆ ಅಂಥ ಸಂಘದ ಚುನಾವಣೆಗೆ ಸಂಬಂಧಿಸಿದ ಸಾಮಾನ್ಯ ಸಭೆಯಲ್ಲಿ /ಆಡಳಿತ ಮಂಡಲಿ ಸಭೆಯಲ್ಲಿ ಭಾಗವಹಿಸುವಂತೆ ಕಾನೂನುಬಾಹಿರವಾಗಿ ನಿಯೋಜಿಸುತ್ತಿರುವ ಅಂಶ ಆಯೋಗದ ಗಮನಕ್ಕೆ ಬಂದಿರುತ್ತದೆ. ಈ ರೀತಿ ಕಾನೂನುಬಾಹಿರ ತೀರ್ಮಾನಗಳಿಗೆ ಸಂಬಂಧಿಸಿದ ಅಪೆಕ್ಸ್ /ಫೆಡರಲ್ ಸಂಘಗಳೇ ಹೊಣೆಗಾರರಾಗುತ್ತಾರೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (ಸಂಕ್ಷಿಪ್ತವಾಗಿ ಅಧಿನಿಯಮ ) ಪ್ರಕರಣ (21) ರಲ್ಲಿ ಮತ ಚಲಾಯಿಸುವ ವಿಧಾನದ ಬಗ್ಗೆ ವಿವರಿಸಲಾಗಿದೆ. **ಅಧಿನಿಯಮ ಪ್ರಕರಣ 21(2)(ಎ) ರೀತ್ಯಾ** -" ಉಪ ಪ್ರಕರಣ(1) ರಲ್ಲಿ ಏನೇ ಇದ್ದರೂ-

(ಎ) ಬೇರೊಂದು ಸಹಕಾರ ಸಂಘದ ಸದಸ್ಯರಾಗಿರುವ ಸಹಕಾರ ಸಂಘದ ಸಮಿತಿಯು, ಅಂತಹ ಬೇರೊಂದು ಸಂಘದ ಕಾರ್ಯಕಲಾಪಗಳಲ್ಲಿ ತಮ್ಮ ಪರವಾಗಿ ಮತ ಚಲಾಯಿಸಲು ಅದರ ಮಂಡಲಿ ಸದಸ್ಯರಲ್ಲೊಬ್ಬರನ್ನು ನೇಮಕ ಮಾಡಬಹುದು.

ಪರಂತು, ಸಹಕಾರ ಸಂಘಕ್ಕೆ ಹೊಸದಾಗಿ ಚುನಾಯಿತವಾದ ಮಂಡಲಿ ಅಸ್ತಿತ್ವಕ್ಕೆ ಬಂದಿದ್ದಲ್ಲಿ, ಆ ರೀತಿ ಹೊಸದಾಗಿ ಚುನಾಯಿತವಾದ ಮಂಡಲಿಯು ಬೇರೊಂದು ಸಹಕಾರ ಸಂಘಕ್ಕೆ ಸದಸ್ಯರಾಗಿದ್ದಲ್ಲಿ ಅಂತಹ ಸಂಘಕ್ಕೆ ಡೆಲಿಗೇಟ್ ಅಥವಾ ನಾಮಿನಿಯನ್ನು ಕಳುಹಿಸತಕ್ಕದ್ದು, ಎಂದಿರುತ್ತದೆ.

**ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ ಪ್ರಕರಣ 21(3) ರೀತ್ಯಾ** " ಯಾವುದೇ ಇತರ ಸಂಘದ ಯಾವುದೇ ಸಭೆಯಲ್ಲಿ ತನ್ನ ಪರವಾಗಿ ಮತ ಚಲಾಯಿಸಲು ಉಪ ಪ್ರಕರಣ ಖಂಡ (ಎ) ಮೇರೆಗೆ ಒಂದು ಸಹಕಾರ ಸಂಘದ ಮಂಡಲಿಯಿಂದ ತನ್ನ ಪರವಾಗಿ ಒಮ್ಮೆ ನಾಮನಿರ್ದೇಶನಗೊಂಡ ಒಬ್ಬ ಸದಸ್ಯನನ್ನು, ಸರ್ವ ಸದಸ್ಯರ ಸಭೆಯಲ್ಲಿ ಹಾಜರಿದ್ದು ಮತ ಚಲಾಯಿಸಿದ ಸದಸ್ಯರ ಬಹುಮತದ ಮೂಲಕ ಅಂಗೀಕಾರವಾದ ನಿರ್ಣಯದ ಹೊರತು ಬದಲಾಯಿಸತಕ್ಕದ್ದಲ್ಲ" ಎಂದಿರುತ್ತದೆ.

**ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 14ಎಕೆ(12) ರಲ್ಲಿ** "ಯಾವುದೇ ಸಹಕಾರ ಸಂಘದ ಸಾಮಾನ್ಯ ಸಭೆಯಲ್ಲಿ ಅಥವಾ ಆಡಳಿತ ಮಂಡಲಿಯ ಸಭೆಯಲ್ಲಿ ಇನ್ನೊಂದು ಸಹಕಾರ ಸಂಘವನ್ನು ಪ್ರತಿನಿಧಿಸುವ ಸಂದರ್ಭದಲ್ಲಿ, ಅಂಥ ಸಹಕಾರ ಸಂಘದ ಆಡಳಿತ ಮಂಡಲಿಯಿಂದ ಪ್ರಾಧಿಕೃತನಾದ ಅಧ್ಯಕ್ಷ ಅಥವಾ ಆಡಳಿತ ಮಂಡಲಿಯ ಸದಸ್ಯನ ಮೂಲಕ ಮಾತ್ರ ಅಂಥ ಸಹಕಾರ ಸಂಘವು ಪ್ರತಿನಿಧಿಸಲ್ಪಡತಕ್ಕದ್ದು" ಎಂಬ ಅಂಶ ಇರುತ್ತದೆ.

ಕರ್ನಾಟಕ ಸಹಕಾರ ಸಂಘಗಳ **ಅಧಿನಿಯಮ 1959 ರ ಪ್ರಕರಣ 29ಸಿ(6)ರ ರೀತ್ಯಾ** ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಥವಾ ಅಪೆಕ್ಸ್ ಸಹಕಾರ ಬ್ಯಾಂಕಿನ ಅಥವಾ ನಿಯಮಿಸಬಹುದಾದಂತಹ ಇತರ ವರ್ಗದ ಸಹಕಾರ ಬ್ಯಾಂಕುಗಳ ಸಮಿತಿಗಳಲ್ಲಿ ವ್ಯಕ್ತಿ ಸದಸ್ಯರ ಯಾರೇ ಪ್ರತಿನಿಧಿ ಇರತಕ್ಕದ್ದಲ್ಲ ಎಂದಿರುತ್ತದೆ.

ಮೇಲೆ ವಿವರಿಸಿದ ಪರಿಸ್ಥಿತಿಯಲ್ಲಿ, ರಾಜ್ಯಮಟ್ಟದ ಕಾರ್ಯವ್ಯಾಪ್ತಿಯುಳ್ಳ ಅಪೆಕ್ಸ್ /ಫೆಡರಲ್ ಸಂಘಗಳು, ತಮ್ಮ ಸಂಘದ ಪ್ರತಿನಿಧಿಯನ್ನು ಬೇರೊಂದು ಸಹಕಾರ ಸಂಘದ ಚುನಾವಣೆಗೆ ಸಂಬಂಧಿಸಿದ ಸಾಮಾನ್ಯ ಸಭೆ/ಆಡಳಿತ ಮಂಡಳಿ ಸಭೆಗಳಲ್ಲಿ ಪ್ರತಿನಿಧಿಸುವ ಸಂದರ್ಭದಲ್ಲಿ, ಅಪೆಕ್ಸ್ /ಫೆಡರಲ್ ಸಂಘದ ಆಡಳಿತ ಮಂಡಳಿಯು, ಅಧ್ಯಕ್ಷ ಅಥವಾ ಆಡಳಿತ ಮಂಡಳಿಯ ಸದಸ್ಯನ ಮೂಲಕ ಮಾತ್ರ ಪ್ರತಿನಿಧಿಸಲ್ಪಡತಕ್ಕದ್ದಾಗಿದೆ ಎಂಬ ಅಂಶವನ್ನು ಸ್ಪಷ್ಟಪಡಿಸಲಾಗಿದೆ. ಆದ ಕಾರಣ ಪದಾಧಿಕಾರಿಗಳ ಚುನಾವಣೆ ಸಂದರ್ಭದಲ್ಲಿ ಸಂಬಂಧಿಸಿದ ರಿಟರ್ನಿಂಗ್ ಆಫೀಸರ್ ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಅಪೆಕ್ಸ್ ಸಂಘದ ಪ್ರತಿನಿಧಿಯು ಆ ಸಂಘದ ಆಡಳಿತ ಮಂಡಳಿ ಸದಸ್ಯನೇ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಆಡಳಿತ ಮಂಡಲಿ ನಿರ್ದೇಶಕನಾಗಿದ್ದಲ್ಲಿ ಮಾತ್ರ ಅದರ ಪ್ರತಿನಿಧಿತ್ವವನ್ನು ಪರಿಗಣಿಸತಕ್ಕದ್ದು. ಚುನಾವಣೆ ನಡೆಸುವ ಹಂತದಲ್ಲಿ ಆಯೋಗದಿಂದ ನೇಮಕವಾಗಿರುವ ರಿಟರ್ನಿಂಗ್ ಆಫೀಸರ್ ಕಾನೂನಿಗೆ ವ್ಯತಿರಿಕ್ತವಾಗಿ ಕಳಿಸಿರುವ ಪ್ರತಿನಿಧಿಯನ್ನು ಪರಿಗಣಿಸಬಾರದೆಂದು ಮತ್ತು ಅಸಿಂಧು ಮಾಡಬೇಕೆಂದು ಆದೇಶಿಸಿದೆ. ಅಪೆಕ್ಸ್ ಸಂಸ್ಥೆಗಳ ಉಪವಿಧಿಗಳಲ್ಲಿ ಏನೇ ಇದ್ದರೂ ಸಹ ಅಧಿನಿಯಮದ ಅವಕಾಶದಂತೆ ಮಾತ್ರ ಕ್ರಮವಿಡುವಂತೆ ರಿಟರ್ನಿಂಗ್ ಆಫೀಸರ್ಸ್‌ಗಳಿಗೆ ನಿರ್ದೇಶಿಸಲಾಗಿದೆ.

**(ಎನ್.ಸಿ. ಮುನಿಯಪ್ಪ)**
**ಸಹಕಾರ ಚುನಾವಣಾ ಆಯುಕ್ತರು**
**ಸಹಕಾರ ಚುನಾವಣಾ ಆಯೋಗ**
**ಬೆಂಗಳೂರು**

**ಇವರಿಗೆ,**

1. ವ್ಯವಸ್ಥಾಪಕ ನಿರ್ದೇಶಕರು, ರಾಜ್ಯಮಟ್ಟದ ಎಲ್ಲಾ ಅಪೆಕ್ಸ್ ಸಹಕಾರ ಸಂಘಗಳು
2. ---------------- ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., -----------
3. -----------------ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿ.,

**ಪ್ರತಿಗಳು:**

1. ಸಹಕಾರ ಸಂಘಗಳ ಉಪನಿಬಂಧಕರು, ---------------ಜಿಲ್ಲೆ-----------
2. ಸಹಕಾರ ಸಂಘಗಳ ನಿಬಂಧಕರು, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560052.
3. ಪ್ರಾಂತೀಯ ಜಂಟಿ ನಿಬಂಧಕರು, ------------ಜಿಲ್ಲೆ----------
4. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ವಿಭಾಗಗಳ ಅಪರ ನಿಬಂಧಕರು.
5. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ವಿಭಾಗಗಳು
6. ಸಹಕಾರ ಸಂಘಗಳ ಜಂಟಿ ನಿಬಂಧಕರು, ------------ಜಿಲ್ಲೆ----------
7. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ------------ಉಪವಿಭಾಗ-------
8. ಕಛೇರಿ ರಕ್ಷಾ ಕಡತ.